# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 26/2022

ಚಾ.ಸಾಃ 11 ಪ್ರಾ.ಸಾಃ 09

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 25.02.2026

| | | |
|---|---|---|
| ಸಾಕ್ಷಿಯ ಹೆಸರು | : | ನಿಂಗಪ್ಪ |
| ತಂದೆಯ ಹೆಸರು | : | ಮಲ್ಲಯ್ಯ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಹೇಮನಾಳ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ಆರೋಪಿತರು ಗೊತ್ತು. ಆರೋಪಿತರು ಪೋಲಿಸರಿಗೆ ಹಲ್ಲೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾವುದೇ ಘಟನೆ ನೋಡಿಲ್ಲ. ನನಗೆ ಈ ಕೇಸಿನ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿಸಲಾಯಿತು)

**ಮಾನ್ಯ ಸರಕಾರಿ ಅಭಿಯೋಜಕರಿಂದ ಪಾಟೀ ಸವಾಲುಃ-**

02. ದಿನಾಂಕ 13.07.2021 ರಂದು 1 ನೇ ಆರೋಪಿಯನ್ನು ಕೆಲವು ವ್ಯಕ್ತಿಗಳು ಜೀಪಿನಲ್ಲಿ ತೆಗೆದುಕೊಂಡು ಹೋಗುತ್ತಿರುವ ಸುದ್ದಿ ಗೊತ್ತಾಗಿ

ನಾವು ಹಿರೇರಾಯಕುಂಪಿ ರಸ್ತೆಯಲ್ಲಿ ಹೋದಾಗ ಆರೋಪಿತರು ಕೈಯಲ್ಲಿ ಕಲ್ಲು ಮತ್ತು ಕಟ್ಟಿಗೆಗಳನ್ನು ಹಿಡಿದುಕೊಂಡು ಬಂದು ಜೀಪನ್ನು ಅಡ್ಡಗಟಿದರು ಎನ್ನುವುದು ಸರಿಯಲ್ಲ. ಜೀಪಿನಲ್ಲಿ ಇದ್ದ 1 ನೇ ಆರೋಪಿ ತನ್ನನ್ನು ಪೋಲಿಸರು ಎಂದು ಹೇಳಿ ಕರೆದುಕೊಂಡು ಹೋಗುತ್ತಿದ್ದಾರೆ ಕಾಪಾಡಿ ಎಂದು ಪ್ರಚೋದನೆ ನೀಡಿದ್ದರಿಂದ ಆರೋಪಿತರು ಆತನನ್ನು ರಕ್ಷಿಸಬೇಕು ಎಂಬ ಉದ್ದೇಶದಿಂದ ಜೀಪಿನಲ್ಲಿ ಇದ್ದವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎನ್ನುವುದು ಸರಿಯಲ್ಲ. ಆಗ ಚಾಸಾ-1 ರವರು ತಾವು ಪೋಲಿಸರು ಮತ್ತು ಇತರರು ಸಿಬ್ಬಂದಿ ಮತ್ತು ವಿಚಾರಣೆಗಾಗಿ 1 ನೇ ಆರೋಪಿಯನ್ನು ಕರೆದುಕೊಂಡು ಹೋಗುತ್ತಿರುವುದಾಗಿ ಮತ್ತು 1 ನೇ ಆರೋಪಿ ಸಂಬಂಧಿಕರಿಗೆ ಸದರಿ ವಿಷಯ ತಿಳಿಸಿರುವುದಾಗಿ ಹೇಳಿದರು ಎನ್ನುವುದು ಸರಿಯಲ್ಲ. ಆದರೂ ಸಹ 4 ನೇ ಆರೋಪಿಯು ಕಟ್ಟಿಗೆಯಿಂದ ಚಾಸಾ-1 ರವರಿಗೆ ತಲೆಗೆ ಹೊಡೆಯಲು ಪ್ರಯತ್ನ ಮಾಡಿದರು ಎನ್ನುವುದು ಸರಿಯಲ್ಲ. ಆಗ 5 ನೇ ಆರೋಪಿಯು ಚಾಸಾ-1 ರವರ ಮರ್ಮಾಂಗಕ್ಕೆ ಒದ್ದೆಯಲು ಪ್ರಯತ್ನ ಮಾಡಿದರು ಎನ್ನುವುದು ಸರಿಯಲ್ಲ. ಚಾಸಾ-5 ರವರಿಗೆ 2 ನೇ ಆರೋಪಿಯು ಕಟ್ಟಿಗೆಯಿಂದ ಹೊಡೆದು ಬಲಗಣ್ಣಿನ ಮೇಲೆ ರಕ್ತಗಾಯ ಮಾಡಿದನು ಎನ್ನುವುದು ಸರಿಯಲ್ಲ. ಉಳಿದ ಆರೋಪಿತರು ಚಾಸಾ-1 ಮತ್ತು ಅವರ ಸಿಬ್ಬಂದಿಗೆ ಕಲ್ಲು ಮತ್ತು ಕಟ್ಟಿಗೆಗಳಿಂದ ಹೊಡೆದರು ಎನ್ನುವುದು ಸರಿಯಲ್ಲ. ಆಗ ಸ್ಥಳಕ್ಕೆ ಬಂದ ಗಬ್ಬೂರು ಠಾಣೆ ಸಿಬ್ಬಂದಿ ಮತ್ತು ನಾವು ಜಗಳ ಬಿಡಿಸಿದೆವು ಎನ್ನುವುದು ಸರಿಯಲ್ಲ. ಈ ರೀತಿ ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ.11 ಎಂದು ಗುರುತಿಸಲಾಯಿತು.

03. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ).

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.